ಮಾತಾಡುವ ಹಾಗೆ ಮಾಡಿರಬಹುದು.

—19—

'ಪ್ರೇಮ್‌ಜಿತ್‌ನ ಫೋನ್ ಸಹಾಯದಿಂದ ಮಿಜ್ರಾಡಿನ್‌ನ ಸ್ಥಾವರವನ್ನು ತಲುಪಿದೆವು. ಎನ್‌ಕೌಂಟರ್ ಆಯಿತು. ನಾಲ್ವರು ಭಯೋತ್ಪಾದಕರು ಸತ್ತರು. ಇಬ್ಬರು ಸೆರೆ ಸಿಕ್ಕರು. ಬಹಳ ಮಾರಕಾಸ್ತ್ರಗಳು ಸಿಕ್ಕಿವೆ ಸರ್'

'ಅದೆಲ್ಲ ಸರಿ, ಮೊದಲು ಗಫಾರ್‌ಖಾನ್ ವಿಷಯ ಹೇಳು'

'ಹಾಸ್ಪಿಟಲ್‌ಗೆ ಸಾಗಿಸಿದ್ದಾರೆ. ಸಲೈನ್ ಕೊಟ್ಟಿದ್ದಾರೆ. ನಾಳೆ ಹೊತ್ತಿಗೆ ಚೇತರಿಸಿಕೊಳ್ಳುತ್ತಾರೆ'

'ಮಿಜ್ರಾಡಿನ್?'

'ಅವನು ಮಾತ್ರ ಸಿಗಲಿಲ್ಲ. ಮಗನಿಗೋಸ್ಕರ ಅಡ್ಡಗುಡ್ಡೆಗೆ ಹೊರಟು ಹೋಗಿದ್ದ.'

'ನಮ್ಮ ಕಮ್ಯಾಂಡೋಗಳನ್ನು ಕಳಿಸಿದ್ದೆವಲ್ಲ?'

'ಅವನು ಹೋಗುವ ರೂಟ್‌ನಲ್ಲಿ ಕಾದಿದ್ದ ನಮ್ಮ ಕಮ್ಯಾಂಡೋಗಳು ವ್ಯಾನನ್ನು ಅಟ್ಯಾಕ್ ಮಾಡಿದರು, ಹಲ್ರಾಫ್ ಎನ್ನುವವನು ಸತ್ತ, ಮಿಜ್ರಾಡಿನ್ ತಪ್ಪಿಸಿಕೊಂಡ'

ಚೀಫ್ ಮುಖದಲ್ಲಿ ಚಿಂತೆ ಕಾಣಿಸಿತು. 'ಅವನು ತಪ್ಪದೆ ಅಡ್ಡಗುಡ್ಡೆ ಕಡೆಗೆ ಹೋಗುತ್ತಾನೆ. ಅಲ್ಲಿ ಕಲ್ಯಾಣಿ ಒಬ್ಬಳೇ ಇದ್ದಾಳೆ' ಎಂದರು.

'ಇಲ್ಲ ಸರ್, ಆ ಎಚ್ಚರಿಕೆ ಕೂಡ ತೆಗೆದುಕೊಂಡಿದ್ದೇವೆ. ಈಗ ನಾನೂ ಅಲ್ಲಿಗೆ ಹೋಗುತ್ತಿದ್ದೇನೆ'

'ನಾನೊಂದು ಪ್ರಶ್ನೆ ಕೇಳುತ್ತೇನೆ ಉತ್ತರ ಹೇಳು ಇಮ್ತಿಯಾಜ್. ಈ ಅನುಮಾನ ನನಗೆ ಮಾತ್ರ ಅಲ್ಲ ಚರಿತ್ರೆ ತಿಳಿದಿರುವ ಪ್ರತಿ ಭಾರತೀಯನಿಗೆ, ಬುದ್ಧಿವಂತರಾದ ಪ್ರತಿ ಪಾಕಿಸ್ತಾನಿಗೆ ಬಂದಿದೆ'

ಇಮ್ತಿಯಾಜ್ ತಲೆ ಎತ್ತಿ ನೋಡಿದನು. ಅವನಿಗೆ ಒಂದೇ ಆಶೆ. ಅವಳು ಹೀಗೆ ಮಾತನಾಡುತ್ತಾ ಸಮಯ ಕಳೆದರೆ, ಅಷ್ಟರಲ್ಲಿ ತನ್ನ ತಂದೆ ಅಲ್ಲಿಗೆ ಬಂದು ತನ್ನನ್ನು ರಕ್ಷಿಸುತ್ತಾನೆ ಎಂದು! ಅವನು ಹಾಗೆ ಯೋಚಿಸುತ್ತಿದ್ದಾಗ ಕಲ್ಯಾಣಿ ಹೇಳಿದಳು. 'ಪಾಕಿಸ್ತಾನ್ ಭಾರತದ ಮೇಲೆ ಪ್ರಯೋಗಿಸಿದ ಮಿಸ್ಸೈಲ್ಸ್ ಹೆಸರು ಘಾಂಜೀ, ಬಾಬರ್, ಗೋರೀ ಇತ್ಯಾದಿ. ಇವೆಲ್ಲ ನಮ್ಮ ದೇಶದ ಮೇಲೆ ದಂಡೆತ್ತಿ ಬಂದು ದೇವಸ್ಥಾನಗಳನ್ನು ಧ್ವಂಸ ಮಾಡಿ, ಲಕ್ಷಾಂತರ ಮಂದಿಯನ್ನು ಕೊಂದು ಧನ, ಬಂಗಾರ, ವಜ್ರಗಳನ್ನು ದೋಚಿದ ಕ್ರೂರಿಗಳಾದ ರಾಜರುಗಳ ಹೆಸರುಗಳು. ಮಿಸ್ಸೈಲ್ಸ್‌ಗೆ ಪಾಕಿಸ್ತಾನ್ ಆ ಹೆಸರಿಟ್ಟದ್ದೇಕೆ?'

ತನ್ನ ಜ್ಞಾನ ಪ್ರದರ್ಶನಕ್ಕೆ ಇಷ್ಟು ಹೊತ್ತಿನ ನಂತರ ಅವಕಾಶ ಸಿಕ್ಕಿತು ಎಂದುಕೊಂಡು 'ಭಾರತ ದೇಶಕ್ಕೆ ಶತ್ರು ಪಾಕಿಸ್ತಾನ್, ಶತ್ರುವಿನ ಶತ್ರು ಮಿತ್ರ, ಇಷ್ಟು ಕೂಡ ತಿಳಿದಿಲ್ಲವೇ?' ಎಂದು ಹೇಳಿದನು.

'ಲೇ ಮೂರ್ಖಾ! ನೀನು ಕಲಿತಿದ್ದು ಇಂಜಿನಿಯರಿಂಗಾ? ಅವರು ದಂಡೆತ್ತಿ ಬಂದ ಸಮಯದಲ್ಲಿ ಪಾಕಿಸ್ತಾನ್ ಹುಟ್ಟಿರಲಿಲ್ಲವೋ. ನಾನು ಹೇಳಿದ್ದು ಇನ್ನೂರು ವರ್ಷಗಳಿಗೂ ಹಿಂದಿನ ವಿಷಯ. ನಿಜಕ್ಕೂ ಅವರು ದೋಚಿದ್ದು ಸಂಯುಕ್ತ ಭಾರತದ ಈಗ ಪಾಕಿಸ್ತಾನ್ ಆಗಿರುವ ಪ್ರದೇಶವನ್ನು'.

ಅವನ ಮುಖ ಕಪ್ಪಿಟ್ಟಿತು.

ಕಲ್ಯಾಣಿ ಹೇಳಿದಳು 'ಒಬ್ಬ ದರೋಡೆಕೋರ ನಿನ್ನ ಮನೆಗೆ ಬರುತ್ತಾನೆ. ನಿನ್ನ ತಾಯಿ–ತಂದೇನ ಸಾಯಿಸುತ್ತಾನೆ. ನಿನ್ನ ಕಣ್ಣೆದುರು ನಿನ್ನ ತಂಗೀನ ರೇಪ್ ಮಾಡಿ, ಇಡೀ ಮನೆಯನ್ನು ದೋಚಿಕೊಂಡು ಹೋಗುತ್ತಾನೆ. ಇಪ್ಪತ್ತೈದು ವರ್ಷಗಳ ನಂತರ ಮನೆಯಲ್ಲಿ ಅವನ ಫೋಟೋ ಇಟ್ಟು ಹೂವಿನ ಹಾರ ಹಾಕುತ್ತೀಯ– ಇದಕ್ಕಿಂತ ಮೂರ್ಖತನ ಇನ್ನೊಂದಿದೆಯಾ?' ಎಂದು ಕ್ಷಣಕಾಲ ತಡೆದು 'ಮತ್ತೆ ಪಾಕಿಸ್ತಾನ ಮಾಡಿದ್ದು ಇದೇ ಕೆಲಸ... ಏಕೆ ಹಾಗೆ ಮಾಡಿತು?' ಎಂದಳು.

ಏನೆಂದು ಉತ್ತರಿಸಬೇಕೋ ತೋಚಲಿಲ್ಲ ಅವನಿಗೆ. ಅವಳೇ ಹೇಳಿದಳು, 'ನೀನು ಹೇಳಲಾರೆ, ನಿರಂತರವಾಗಿ ಪಾಕಿಸ್ತಾನ್ ಜಪ ಮಾಡುವ ನಿಮ್ಮಪ್ಪನಂತಹ ಟೆರರಿಸ್ಟ್‌ಗಳು ಕೂಡ ಹೇಳಲಾರರು'

ಅವನೇನೋ ಹೇಳಬೇಕು ಅನ್ನುವಷ್ಟರಲ್ಲಿ ದೂರದಲ್ಲಿ ಯಾರೋ 'ಇಮ್ತಿಯಾಜ್.... ಇಮ್ತಿಯಾಜ್' ಎಂದು ಕೂಗಿದ್ದು ಕೇಳಿ ಅವನ ಮುಖ ಅರಳಿತು.


